**CC. No.176/2022** **PW - 1**

ಪ್ರಮಾಣೀಕರಿಸಲಾದ ದಿನಾಂಕಃ- **21.07.2025.**

ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್ ಎನ್ ವಕೀಲರಿಂದಃ-

ದಿ. 10.11.2020 ರಂದು ಆಗಿದ್ದ ನಿ. ಪಿ. 9 ಕರಾರು ಮುಂಚೆಯೇ ಹಣವನ್ನು ಕೊಟ್ಟಿದ್ದೆ. ನಿ. ಪಿ. 9 ಕರಾರಿನಲ್ಲಿ ಹಣ ಕೊಟ್ಟ ಬಗ್ಗೆ ದಿನಾಂಕ ನಮೂದಿಲ್ಲ. ಹಣ ಕೊಟ್ಟು 1 ವರ್ಷ 1 ತಿಂಗಳ ನಂತರ State bank ಚೆಕ್ ಪಡೆದಿರುತ್ತೇನೆ. ನಿ. ಪಿ. 9 ಕರಾರು ಆದ ನಂತರ ಚೆಕ್ ಪಡೆದಿರುತ್ತೇನೆ. ಆರೋಪಿ ಮತ್ತು ನಾನು ಯಾವುದೇ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರಲಿಲ್ಲ. ನಿ. ಪಿ. 9 ಕರಾರು ಮಾಡುವ ಪೂರ್ವದಲ್ಲಿ ಹಣಕಾಸಿನ ಮಾತುಕತೆ ಪೊ. ಠಾಣೆಯಲ್ಲಿ ಆಗಿರಲಿಲ್ಲ. ಆರೋಪಿ ವಿರುದ್ಧ ಪೊ. ಠಾಣೆಯಲ್ಲಿ ಹಣ ವಾಪಸ್ ಕೊಡಬೇಕೆಂದು ದಿ. 11.11.2021 ರಂದು ದೂರು ಕೊಟ್ಟಿರುತ್ತೇನೆ. ನಾನು ನನ್ನ ಭಾವ ಪೂಣಚ್ಚರವರು ಮಾತ್ರ ಪೊ ಠಾಣೆಗೆ ಹೋಗಿದ್ದೆವು, ಮಗಳು ಇರಲಿಲ್ಲ. ನನ್ನ ಭಾವ ಪೂಣಚ್ಚರವರು ಈ ನ್ಯಾಯಾಲಯದಲ್ಲಿ ಈ ಆರೋಪಿ ವಿರುದ್ಧ ರೂ. 5 ಲಕ್ಷ ಚೆಕ್ ಪ್ರಕರಣ ಹಾಕಿರುತ್ತಾರೆ ಎಂದರೆ ಸರಿ. ಪೂಣಚ್ಚರವರು ರೂ. 45,212/- ಹಣಕ್ಕೆ ಹಿರಿಯ ಶ್ರೇಣಿಯಲ್ಲಿ ಆರೋಪಿ ವಿರುದ್ಧ ಸಿವಿಲ್ ದಾವೆ ಹಾಕಿದ್ದಾರೆ ಎಂದರೆ ಸರಿ.

ನಿ. ಪಿ. 9 ಕರಾರು ಸಹಿ ಹಾಕುವಾಗ ಉತ್ತಪ್ಪ ಮತ್ತು ಸುರೇಶ್ ರವರು ಇದ್ದರು ಪೊ. ಠಾಣೆಯಲ್ಲಿ ಇರಲಿಲ್ಲ. ಆದ್ದರಿಂದ ಈ ಪ್ರಕರಣದ ಚೆಕ್ ಇವರಿಬ್ಬರಿಗೂ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿ. 11.11.2021 ರಂದು ಆರೋಪಿ ನನ್ನ ಒಡವೆಗಳನ್ನು ಲಪಾಟಿಯಿಸಿಕೊಂಡು ನನ್ನ ಚೆಕ್‌ಗಳನ್ನು ಬಳಸಿ ಲಕ್ಷಾಂತರ ಹಣ ತೆಗೆದುಕೊಂಡಿದ್ದಾರೆ ಎಂದು ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ಅದೇ ದೂರಿನಲ್ಲಿ ರೂ. 30 ಲಕ್ಷ ಬೆಲೆ ಬಾಳುವ ಆಭರಣಗಳನ್ನು ಗಿರವಿ ಇಟ್ಟುಕೊ ಆರೋಪಿಗೆ ಕೊಟ್ಟು ಬಟ್ಟೆ ವ್ಯಾಪಾರ ಮಾಡಲು ಕೊಟ್ಟಿದ್ದೆ ಎಂದು ಬರೆದಿದ್ದೆ ಎಂದರೆ ಸರಿ. ರೂ. 18 ಲಕ್ಷದ 65 ಸಾವಿರಕ್ಕೆ ಬಡ್ಡಿ ಸೇರಿ ರೂ 20 ಲಕ್ಷ ಮೇಲ್ಪಾಟ್ಟಾಗಿದ್ದು ನನ್ನ ಮಗಳ ಹೆಸರು ಶ್ರೇಯ ಹೆಸರಿಗೆ ಗಿರವಿ ಖಾತೆ ವರ್ಗಾಯಿಸಲಾಯಿತು ಎಂದರೆ ಸರಿ, ಮುಂದುವರೆದು ಆ ಹಣವನ್ನು ನನ್ನ ಮಗಳು

ಬ್ಯಾಂಕಿಗೆ ಕೊಟ್ಟಿರುತ್ತಾರೆ. ಮುಂದುವರೆದು 500 ಗ್ರಾಂ ನಷ್ಟು ಆಭರಣಗಳನ್ನು ಬೇರೆ ಅವರಿಗೆ ಆರೋಪಿ ಮಾರಾಟಮಾಡಿದ್ದರು. S.P. office, ಮಹಿಳಾ ಹಕ್ಕುಗಳ ಆಯೋಗ, ಮಾನವ ಹಕ್ಕುಗಳ ಆಯೋಗಕ್ಕೆ ಒಡವೆಗಳನ್ನು ವಾಪಸ್ ಕೊಡಲು ಕೇಳಿರುತ್ತೇನೆ ಎಂದರೆ ಸರಿ, ಸ್ಥಳೀಯ ಪೊಲೀಸರು ಸಹಕಾರ ಮಾಡಲಿಲ್ಲ. 2016 ರಲ್ಲಿ ನನ್ನ ಬಳಿ ನನ್ನ ಗಂಡನ ಮನೆ ಮಾರಾಟ ಮಾಡಿದ ಹಣವಿತ್ತು. ಮಾರಾಟ ಮಾಡಿದ ನಂತರ ರೂ. 75 ಲಕ್ಷ ಹಣ ಖರ್ಚು ಮಾಡಿ ಹೊಸದಾಗಿ ಮನೆ ಕಟ್ಟಿರುತ್ತೇವೆ.

ನಿ. ಪಿ. 11 ಮತ್ತು ನಿ. ಪಿ. 12 ರಲ್ಲಿ ಆರ್ ಟಿ ಸಿ ಯಲ್ಲಿ ರೂ. 84,000/- ಮತ್ತು 15,59,000/- ರೂ. 2,96,000/-, ರೂ. 3,00,000/- ಸಾಲ ಈ ಆಸ್ತಿಯನ್ನು ಆಧಾರ ಮಾಡಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಈ ಎಲ್ಲ ಸಾಲವನ್ನು ತೀರಿಸಲಾಗಿದೆ. ನಿ. ಪಿ. 13 ರಲ್ಲಿ ರೂ. 5,00,000/- ಆಧಾರ ಮಾಡಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಈ ಎಲ್ಲ ಸಾಲಗಳನ್ನು ತೀರಿಸಲಾಗಿದೆ. ಈ ಎಲ್ಲ ಸಾಲಗಳನ್ನು ತೀರಿಸಿದ ದಾಖಲೆಗಳಿದೆ ಆದರೆ ಅದನ್ನು ಹಾಜರುಪಡಿಸಿಲ್ಲ. ನಿ. ಪಿ. 15 ರಿಂದ 17 ಬಾಡಿಗೆ ಕರಾರುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ, ನನಗೆ ಬಾಡಿಗೆ ಕೊಡಲು ಯಾವುದೇ ಮನೆಗಳಿಲ್ಲ ಎಂದರೆ ಸರಿಯಲ್ಲ. ಸಹಿ ಮತ್ತು ಚೆಕ್‌ನಲ್ಲಿರುವ ಬರವಣಿಗೆಯನ್ನು ಬೇರೆ ಪೆನ್‌ಗಳಿಂದ ಬರೆಯಲಾಗಿದೆ ಎಂದರೆ ಸರಿ. ಆರೋಪಿ ಜೊತೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸಂಘಗಳಲ್ಲಿ ಕೊಟ್ಟಂತಹ ಚೆಕ್‌ಗಳನ್ನು ನಾನು ಮತ್ತು ನನ್ನ ಭಾವ ದುರುಪಯೋಗ ಮಾಡಿಕೊಂಡು ಈ ಸುಳ್ಳು ಪ್ರಕರಣದ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿ ಹಣ ಕೊಡಲು ಯಾವುದೇ ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ